ಬಂದು ಕುಳಿತರು. ಸುದ್ದಿ ಹೇಳಲು ಬಾಯಿ ತುರಿಸುತ್ತಿತ್ತು. ಮೊಮ್ಮಗಳು ಸ್ಕೂಲಿಗೆ ಹೋಗಿಯಾಗಿತ್ತು. ಮಗಳು ಅಳಿಯ ಕೆಲಸಕ್ಕೆ ಹೋಗುವ ತರಾತುರಿಯಲ್ಲಿದ್ದರು. ಹೆಂಡತಿ ಅಡಿಗೆಕೋಣೆಯಲ್ಲಿ ಕೆಲಸ ವಹಿಸಿಕೊಂಡಿದ್ದಳು. ಒಂದು ಕಾಫಿ ಕೇಳಿ ಕುಡಿದರು. ಕಾಲು ಕಿಲೋ ತೂಗುವ ಗಾತ್ರದ ನ್ಯೂಸ್‌ಪೇಪರು ಬಿದ್ದಿತ್ತು. ಓದತೊಡಗಿದರು. ಯಾವ ಸುದ್ದಿಸಮಾಚಾರಕ್ಕೂ ಹಿಂದಿನ ಕೊಂಡಿ ಸಿಕ್ಕದೆ ನೀರಸವೆನಿಸಿತು. ಸಾಯಂಕಾಲ ಮಗಳು, ಅಳಿಯ ನಲವತ್ತು ಮೈಲು ಡ್ರೈವ್ ಮಾಡಿ ಕರೆದುಕೊಂಡು ಹೋಗಿ ಇಂಡಿಯನ್ ಸ್ಟೋರ್ಸ್‌ನಲ್ಲಿ ಸುಮಾರು ಖರೀದಿ ಮಾಡಿದರು. ರಾತ್ರಿ ತಾಯಿಗೆ ಮಗಳಿಂದ ಡಿಮ್ಯಾಂಡಿನ ಒಂದು ಲಿಸ್ಟು ಬಂತು. ಬೆಳಿಗ್ಗೆ ಸೌತೆಕಾಯಿ ದೋಸೆ, ಮರುದಿನ ಬೂದುಗುಂಬಳ ಮಜ್ಜಿಗೆ ಹುಳಿ, ಅವಿಯಲ್, ತೇಙ ಪ್ರಥಮನ್, ಅಚ್ಚಪ್ಪನ್ ಹೀಗೇ...

ಮೆನನ್ ತಿಂಡಿ ಕಾಫಿ ಮುಗಿಸಿ ದಾರಿಪಕ್ಕ ನಿಲ್ಲುತ್ತಿದ್ದರು. ಭಾರತದಲ್ಲಾದರೆ ನಾಲ್ಕಾರು ಅಟೋರಿಕ್ಷಾಗಳು ಇಷ್ಟರಲ್ಲಿ ಪ್ಯಾಂವ್‌ಪ್ಯಾಂವ್ ಅಂತಾ ಕಿರುಚಿ ತಮ್ಮನ್ನ ಆಹ್ವಾನಿಸಿ ಹೋಗುತ್ತಿದ್ದರು. ಒಂದೇ ಒಂದು ಜಲ್ಲಿಕಲ್ಲು ಮಣ್ಣು ಹೊತ್ತ ಟ್ರ್ಯಾಕ್ಟರಿಲ್ಲ; ಒಂದು ತಳ್ಳುಗಾಡಿಯಿಲ್ಲ; ಬೀಡಿಸೇದಿ ಉಗಿದುಕೊಂಡು ಹೋಗುವವರಿಲ್ಲ; ನಡೆದುಕೊಂಡು ಹೋಗುವವರೇ ಇಲ್ಲ. ಶರವೇಗದಲ್ಲಿ ವಾಹನವನ್ನು ಬಲಗಡೆ ಓಡಿಸಿಕೊಂಡು ಯಾರಿಂದಲೋ ತಪ್ಪಿಸಿಕೊಳ್ಳುವಂತೆ ಎತ್ತಲೋ ಧಾವಿಸುತ್ತಿದ್ದರು. ಬೇಸರ ಬಂತು. ತಿರುಗಿಬಂದು ಟೀವಿ ಹಾಕಿದರು. ಬೀಚಿನಲ್ಲಿ ಬಿಚ್ಚಮ್ಮಗಳು ದಡಕ್ಕೆ ತೇಲಿಬಂದ ಮೀನುಗಳಂತೆ ಬಿದ್ದುಕೊಂಡ ದೃಶ್ಯ. ಚಾನಲ್ ಬದಲಿಸಿದರು. ಚುಂಬನ, ನೃತ್ಯ, ಸಾಯುವಂತೆ ಒಬ್ಬರಿಗೊಬ್ಬರು ಹೊಡೆದುಕೊಳ್ಳುವ ಆಟ... ಚಾನಲ್ ಬದಲಿಸುತ್ತಾ ಒಂದರಲ್ಲಿ ಕ್ರಿಕೆಟ್ಟು ಬಂತು. ಅವರ ಪ್ರೀತಿಯದ್ದು ನೋಡುತ್ತಾ ಕುಳಿತರು. ಕುಂತಲ್ಲೇ ಕಾಫಿ... ಕ್ರಿಕೆಟ್ಟು... ಕಾಫಿ... ಹೆಂಡತಿಯ ಆಕ್ಷೇಪಣೆ... ಮತ್ತೆ ಕ್ರಿಕೆಟ್ಟು. ಕ್ರಿಕೆಟ್ಟು ಮುಗಿಯಿತು ಮಲಗಿದರು; ಬೇಸರ ಬರತೊಡಗಿತು. 'ಎಲ್ಲಾದರು ನಾನು ನಿನ್ನಮ್ಮ ಹೊರಗಡೆ ಹೋಗಿಬರಬಹುದಾಗಿತ್ತೇನೋ...' ಶನಿವಾರ ಬೆಳಿಗ್ಗೆ ಮಗಳ ಹತ್ತಿರ ಹೇಳಿದರು. ಅವಳಿಗರ್ಥವಾಯಿತು. ಇವತ್ತು ಮೂರುಗಂಟೆಗೆ ಗಾಳಿಯಿಂದ ಕೂಡಿದ ಮಳೆ ಬರುತ್ತೆ ಅಂತಿದೆ ಹವಾಮಾನ ಮೂನ್ಸೂಚನೇಲಿ, ನಾಳೆ ಹೋಗೋಣ ಎಲ್ಲಾದ್ರು. ಪ್ರಶಾಂತನ ಸಂಗಡ ಮಾತಾಡತೀನಿ' ಅಂದಳು. ಇಂತಾ ಹವಾಮಾನ ಮುನ್ಸೂಚನೆ ದಿನಾ ಕೇಳತಿರ್ತೀವಿ, ತಮಾಷೆಯಾಗಿರುತ್ತೆ ಅಂದುಕೊಂಡರು ಮನದಲ್ಲಿ, ಆದರೆ ಹೇಳಲಿಲ್ಲ. ಎರಡು ಮುಕ್ಕಾಲಾದರೂ ಸ್ವಚ್ಚ ಬಿಸಿಲಿತ್ತು. ಆಕಾಶದಲ್ಲಿ ಮೋಡದ ಚೂರಿರಲಿಲ್ಲ. ಮೂರುಗಂಟೆಗೆ ಅವಳನ್ನ ಮಾತಾಡಿಸ್ತೀನಿ ಅಂತ ಮನದಲ್ಲೆ ನಗುತ್ತ ಕುಳಿತರು. ಮೂರು ಗಂಟೆಯಾಗುತ್ತಿದ್ದಂತೆ ಮೆಲ್ಲನೆ ಗಾಳಿ ಬೀಸತೊಡಗಿತು. ಮತ್ತೈದು ನಿಮಿಷದಲ್ಲಿ ಮೋಡ ಕವಿದು ಒಂದು ತಾಸು ಮಳೆಗಾಳಿ ಅಬ್ಬರಿಸಿ ತಣ್ಣಗಾಯಿತು. ನೆನೆದ ಹುಲ್ಲುಹಾಸನ್ನ ನೋಡುತ್ತ ನಿಂತರು. ಅಳಿಯ ಮಗಳು ಇಷ್ಟಪಟ್ಟಿದ್ದಕ್ಕೆ ದೇವಕಿಮಾಮಿ ಈರುಳ್ಳಿ ಪಕೋಡ ಕರಿದರು. ಮಳೆಯಲ್ಲಿ ನೆನೆದ ಸಂಜೆಯಲ್ಲಿ ಹಬೆಯಾಡುವ ಕಾಫಿಯ ಗುಟುಕಿನೊಂದಿಗೆ ಘಮಗುಡುವ ಈರುಳ್ಳಿ ಪಕೋಡದ ಕುರುಗುಟ್ಟುವಿಕೆ ಹುಟ್ಟಿದ ನಾಡಿನ ಯಾವ್ಯಾವುದೋ ನೆನಪಿಗೆ ಕಾರಣವಾಗುತ್ತಿದ್ದರೆ ಮೆನನ್ ಅಂದರು: 'ಜೋರ್ಡಾನ್‌ನಲ್ಲಿರುವಾಗ ಹೀಗೇ; ರಾತ್ರಿ ಮೇಲೆ ತಣ್ಣಗೆ ಹೊಳೆಯೋ ಚಂದ್ರ, ಕಾಲಡಿ ಬೆಳದಿಂಗಳಲ್ಲಿ ತೊಯ್ದ ಮರಳಮೆತ್ತೆ. ರುಕ್ಮಿಣಿ ಕೇಳು, ಅಂಗೈಲಿ ನಮ್ಮ ಕೆನ್ನೆ ಒತ್ತಿಕೊಂಡರೆ ಅನಿಸುತ್ತಲ್ಲ ಅಷ್ಟು ಬೆಚ್ಚಗಿರೋದು. ಸ್ಕಾಚ್‌ವ್ಹಿಸ್ಕಿ ಗುಟುಕಿನೊಂದಿಗೆ ಇಂಥದೇ